**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ- 1394/2021**

**ಪ್ರಾಸಾಃ- 6 ಚಾಸಾಃ- 4**

| | | |
|---|---|---|
| ಸಾಕ್ಷಿಯ ಹೆಸರು | : | ಅಯ್ಯಪ್ಪ |
| ತಂದೆಯ ಹೆಸರು | : | ದ್ಯಾವಣ್ಣ |
| ವಯಸ್ಸು | : | 31 ವರ್ಷ |
| ವೃತ್ತಿ | : | ಎಸ್ ಡಿ ಸಿ, ಮಹಾನಗರ ಪಾಲಿಕೆ, ಬಳ್ಳಾರಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 10.2.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ಚಾಸಾ 5 ನನಗೆ ಗೊತ್ತು. ಅವರು ನನ್ನ ಸಹುದ್ಯೋಗಿಗಳು. ನಮ್ಮ ಉಪ ಆಯಕ್ತರು ಆಡಳಿತ ವಿಭಾಗದವರು ದಿಃ 14-9-2021 ರಂದು ಈ ಪ್ರಕರಣದಲ್ಲಿ ಪಂಚನಾಮೆಗೆ ಹೋಗುವಂತೆ ಗಾಂಧಿನಗರದ ಪೋಲೀಸ್ ಠಾಣೆಯಲ್ಲಿ ಡಿ ವೈ ಎಸ್ ಪಿ ರವರ ಮುಂದೆ ಹಾಜರಾಗುವಂತೆ ಹೇಳಿದ ಮೇರೆಗೆ ನಾನು ಮತ್ತು ಚಾಸಾ 5 ರವರು ಹೋಗಿರುತ್ತೇವೆ.

2. ದಿಃ 12-9-2021 ರಂದು ಗಣೇಶ ಉತ್ಸವದಲ್ಲಿ ಗಲಾಟೆಯಾಗಿದ್ದು ಸದರಿ ಗಲಾಟೆಯ ಪರಿಕರಗಳನ್ನು ಜಪ್ತುಗೊಳಿಸಲು ಪಂಚನಾಮೆ ಮಾಡಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ನಾನು ಹೋದಾಗ ಸದರಿ ಪೋಲೀಸ್ ಠಾಣೆಯಲ್ಲಿ ತನಿಖಾಧಿಕಾರಿ, ಆರೋಪಿ ಅಬ್ದುಲ್, ಮಹಮ್ಮದ್ ಘಜ್ನಿ ಆರೋಪಿತರು ಇದ್ದರು. ಸದರಿ ದಿನ ರಾತ್ರಿ 10-00 ಗಂಟೆ ಸುಮಾರಿಗೆ ಅನಿಲ್ ಮತ್ತು ಮಾರೆಣ್ಣ ರವರಿಗೆ ಹೊಡೆದಿರುತ್ತಾನೆ ಎಂದು ಸದರಿ ಹೊಡೆಯಲು ಬಳಸಿದ ಕಟ್ಟಿಗೆಗಳನ್ನು ಟಾಟಾ ಏಸಿಯ ವಾಹನದ ಮೇಲ್ಭಾಗದಲ್ಲಿ ಇಟ್ಟಿರುತ್ತೇನೆ ಎಂದು ಅಬ್ದುಲ್ ತಿಳಿಸಿರುತ್ತಾನೆ. ನಂತರ ಆ ಕಟ್ಟಿಗೆಗಳನ್ನು ಆತನು ತೆಗೆದು ತೋರಿಸಿರುತ್ತಾನೆ. ಕೆಎ 34 ಎ 2341 ಟಾಟಾ ಎಸಿ ನಂಬರ್ ಆಗಿರುತ್ತದೆ. ಸಾಕ್ಷಿಯು ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-10

ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ಮತ್ತು 7 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-6 ಮತ್ತು 7 ರಲ್ಲಿರುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮು ಮಾ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಮು ಮಾ 1 ಮತ್ತು 2 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ತನ್ನ ಸಹಿಗಳು ಇರುತ್ತವೆ ಎಂದು ಸಾಕ್ಷಿಯ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಪಿ ಮತ್ತು ಪಿ ಆರ್ ಬಿ ವಕೀಲರಿಂದಃ**

3. ನಾನು ಬಿ ಕಾಂ ಪದವೀಧರ. ನಾನು 2021 ಆಗಸ್ಟ್ ತಿಂಗಳಿನಿಂದ ಮಹಾನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನಾನು ಲೆಕ್ಕ ಪತ್ರ ಶಾಖೆಯಲ್ಲಿ ವಿಷಯ ನಿರ್ವಾಹಕ ಎಂದು ಕೆಲಸ ನಿರ್ವಹಿಸುತ್ತೇನೆ. ನಮ್ಮ ಕಚೇರಿಯ ಕೆಲಸದ ಅವಧಿ ಬೆಳಿಗ್ಗೆ 10-00 ರಿಂದ ಸಾಯಂಕಾಲ 6-00. ನಮ್ಮ ಕಚೇರಿಯಲ್ಲಿ ಹಾಜರಾತಿ ಪುಸ್ತಕ ಇರುತ್ತದೆ. ದಿಃ 14-9-2021 ರಂದು ನಮ್ಮ ಹಾಜರಾತಿ ಪುಸ್ತಕದಲ್ಲಿ ನನ್ನ ಹಾಜರಾತಿ ನಮೂದಾಗಿರುತ್ತದೆ. ಸದರಿ ಹಾಜರಾತಿಯ ಬಗ್ಗೆ ತನಿಖಾಧಿಕಾರಿಯು ನನ್ನನ್ನು ಕೇಳಿರುವುದಿಲ್ಲ. ನಮ್ಮ ಕಚೇರಿಯಲ್ಲಿ ಚಲನವಹಿ ಇರುತ್ತದೆ. ಸದರಿ ಕಚೇರಿ ಕರ್ತವ್ಯದ ಮೇಲೆ ಹೊರಗೆ ಹೋಗಬೇಕೆಂದರೆ ಸಮಯ, ದಿನಾಂಕ ಮತ್ತು ಕರ್ತವ್ಯದ ಬಗ್ಗೆ ಸದರಿ ವಹಿಯಲ್ಲಿ ನಮೂದಿಸಿರುತ್ತೇವೆ. ಮರಳಿ ಬರುವಾಗ ಮತ್ತೆ ನಾವು ನಮೂದು ಮಾಡಿರುತ್ತೇವೆ.

4. ಪಂಚನಾಮೆಗೆ ಹೋಗುವಂತೆ ನನಗೆ ಉಪ ಆಯುಕ್ತರು ಲಿಖಿತ ಆದೇಶ ಕೊಟ್ಟಿರುವುದಿಲ್ಲ. ಸದರಿ ನಾನು ಪಂಚನಾಮೆಗೆ ಹೋದ ಬಗ್ಗೆ ಚಲನವಹಿಯಲ್ಲಿ ನಮೂದಿಸಿದ ಬಗ್ಗೆ ಈಗ ನನಗೆ ನೆನಪಿಲ್ಲ. ಚಲನವಹಿಯ ಬಗ್ಗೆ ನಮೂದಿಸಿದ ಬಗ್ಗೆ ತನಿಖಾಧಿಕಾರಿಯು ಕೇಳಿರುವುದಿಲ್ಲ. ನಾನೂ ಸಹ ಸದರಿ ವಹಿಯಲ್ಲಿ ನಮೂದಿಸಿದ ಬಗ್ಗೆಏನೂ ಹೇಳಿರುವುದಿಲ್ಲ.

5. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಮ್ಮ ಕಚೇರಿಯಿಂದ ಹೊರಗೆ ಹೋಗಿಲ್ಲ ಹಾಗೂ ಪೋಲೀಸ್ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು

ಪೋಲೀಸ್ ಠಾಣೆಗೆ ಹೋಗದೇ ಇರುವುದರಿಂದ ನನ್ನ ಸಮಕ್ಷಮ ನಿಪಿ-10 ರಂತೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-6 ಮತ್ತು 7 ನ್ನು ಅಧಿಕೃತವಾಗಿ ಪೋಟೋಗಳನ್ನು ತೆಗೆದಿಲ್ಲ ಅವುಗಳನ್ನು ಪೋಲೀಸರು ಅನಧಿಕೃತವಾಗಿ ಈ ಕೇಸಿಗೆ ಪೂರಕವಾಗಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಪಂಚನಾಮೆಗೆ ಹೋಗದಿದ್ದರೂ ಸಹಿತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ರಂತಹ ಕಟ್ಟಿಗೆಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಇರಬಹುದು. ಚಾಸಾ 1 ರವರೂ ಸಹ ಈ ದಿನ ನ್ಯಾಯಾಲಯವಿಕ್ಕೆ ನಮ್ಮ ಜೊತೆ ಬಂದಿರುತ್ತಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೆ. ಸರಿ ಇದೆ.**

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ವಿಶೇಷ ಮೊಕದ್ದಮೆ ಸಂಖ್ಯೆ- 1394/2021

ಪ್ರಾಸಾಃ- 7 ಚಾಸಾಃ- 7

| | | |
|---|---|---|
| ಸಾಕ್ಷಿಯ ಹೆಸರು | : | ರೋಹಿತ್ ಕುಮಾರ್.ಜಿ |
| ತಂದೆಯ ಹೆಸರು | : | ಲೇಟ್ ಎಸ್. ಜಿ. ಸುಧಾಕರ್ ರೆಡ್ಡಿ |
| ವಯಸ್ಸು | : | 23 ವರ್ಷ |
| ವೃತ್ತಿ | : | ಸೂಪರ್ ವೈಜರ್, ಖಾಸಗಿ ಕಂಪನಿ, |
| ವಾಸಸ್ಥಳ | : | ಬೆಂಗಳೂರು |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 10.2.2025

ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

1. ನನಗೆ ಚಾಸಾ 1, 6 ರಿಂದ 8, 10 ರಿಂದ 12 ರವರು ಗೊತ್ತು. ಆರೋಪಿತರು ನನಗೆ ಘಟನೆಯಾದ ನಂತರ ಗೊತ್ತಾಗಿರುತ್ತಾರೆ. ಚಾಸಾ 1 ರವರು ವಾಲ್ಮೀಕಿ ಜನಾಂಗದವರು. ನಾನು ಲಿಂಗಾಯತ ಜನಾಂಗದವನು.

2. ದಿಃ 12-9-2021 ರಂದು ಗಾಂದಿನಗರ ಹೌಸಿಂಗ್ ಬೋರ್ಡ್ ಬನ್ನಿಕಟ್ಟೆ ಪಾರ್ಕ್ ಬಳಿ ನಾವು ಗಣಪತಿ ಇಟ್ಟಿದ್ದು ಅಲ್ಲಿ ಅನ್ನದಾನದ ಕಾರ್ಯ ಇತ್ತು. ನಾನು ಬಂದಾಗ ರಾತ್ರಿ 10-00, 10-30 ಗಂಟೆಯಾಗಿತ್ತು. ಚಾಸಾ 1 ಮತ್ತು 8 ರವರು ಚಾಸಾ 7 ರವರನ್ನು ಆರೋಪಿ 1 ರ ಕಡೆಯಿಂದ ಬಿಡಿಸಿಕೊಂಡು ನಮ್ಮ ದಾರಿಯಿಂದ ಯಾಕೆ ಹೋಗಲಿಲ್ಲ ಎಂದು 1 ನೇ ಆರೋಪಿಯು ಚಾಸಾ 7 ರವರಿಗೆ ಕೇಳುತ್ತಿದ್ದ ಆಗ ಚಾಸಾ 8 ರವರು ಅಲ್ಲಿಗೆ ಹೋಗಿ ಯಾಕೆ ಬೈಯುತ್ತೀಯಾ ಎಂದು ಕೇಳಿದನು. ಆಗ ಚಾಸಾ 8 ರವರಿಗೆ 1 ನೇ ಆರೋಪಿಯು ವಾಲ್ಮೀಕಿ ಸೂಳೆ ಮಗನೇ ಎಂದು ಬೈದನು. ಸರಿಯಾಗಿ ಮಾತನಾಡು ಈ ರೀತಿ ಯಾಕೆ ಬೈಯುತ್ತೀಯಾ ಎಂದು ಹೇಳಿದನು. ಆಗ 1 ನೇ ಆರೊಪಿಯು ಅಲ್ಲಿಂದ ಹೋದನು. 10-15 ನಿಮಿಷ ಬಿಟ್ಟು ಟಾಟಾ ಎಸಿ ಗಾಡಿ ತೆಗೆದುಕೊಂಡು ಒಂದು 20 ರ ಮೇಲೆ ಜನ ಕರೆದುಕೊಂಡು 1 ಮತ್ತು 2 ನೇ ಆರೋಪಿತರು ಅಲ್ಲಿಗೆ ಬಂದರು. ಗುಡದೂರು ವಿರೇಶ ಇದ್ದರು. ಉಳಿದವರನ್ನು ನೋಡಿದರೆ ಗುರುತಿಸುತ್ತೇನೆ.

ವಾಲ್ಮೀಕಿ ಸೂಳೆ ಮಗನೇ ನೀನೇಕೆ ಬಂದಿಯಾ ನಿನ್ನ ಹಾಂಗೆ ಮಾಡುತ್ತೇವೆ ಹಿಂಗೇ ಮಾಡುತ್ತೇವೆ ಎಂದು ಚಾಸಾ 1 ರವರಿಗೆ ಕಟ್ಟಿಗೆಯಿಂದ ಹೊಡೆದರು. 1 ನೇ ಆರೋಪಿಯು ಚಾಸಾ 1 ರವರಿಗೆ ಏಕೆ ಇದರಲ್ಲಿ ಭಾಗವಹಿಸುತ್ತೀಯಾ ಎಂದು ಬೈದನು. ಸದರಿ ಏಟು ಚಾಸಾ 1 ರವರಿಗೆ ತಲೆಯಿಂದ ಮಿಸ್ಸಾಗಿ ಎಡಕಣ್ಣಿನ ಪಕ್ಕಕ್ಕೆ ಹೊಡೆದನು. ಚಾಸಾ 1 ರವರ ಚಿಕ್ಕಪ್ಪ ಚಾಸಾ 6 ರವರು ಜಗಳ ಬಿಡಿಸಲು ಬಂದಾಗ 2 ನೇ ಆರೋಪಿಯು ಇನ್ನೊಂದು ಕಟ್ಟಿಗೆ ತೆಗೆದುಕೊಂಡು ಬಲ ಕಣ್ಣಿನ ಹುಬ್ಬಿಗೆ ಚಾಸಾ 6 ರವರಿಗೆ ಹೊಡೆದನು. ನಂತರ ನಾನು, ಚಾಸಾ 10, 11 ರವರು ಜಗಳ ಬಿಡಿಸಿದೆವು. ನಂತರ ಆರೋಪಿತರು ಆಟೋ ತೆಗೆದುಕೊಂಡು ಹೋದರು. ನ್ಯಾಯಾಲಯದಲ್ಲಿ ಹಾಜರು ಇರುವ 1 ನೇ ಆರೊಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 2 ರಿಂದ 4 ನೇ ಆರೊಪಿತರು ಗೈರು ಹಾಜರು ಇದ್ದು ಅವರನ್ನು ಗುರುತಿಸುವಿಕೆಯಲ್ಲಿ ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ತಮ್ಮ ಅರ್ಜಿಯಲ್ಲಿ ನಮೂದಿಸಿರುತ್ತಾರೆ. ಮು ಮಾ 1 ಮತ್ತು 2 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಟಾಟಾ ಎಸಿಯ ನಂಬರ್ ಕೆಎ 34 ಎ 2341 ಆಗಿರುತ್ತದೆ. ಈ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

3. ಅದೇ ದಿನ 3 ಮತ್ತು 4 ನೇ ಆರೋಪಿತರು ಚಾಸಾ 6 ರವರಿಗೆ ಕೈಗಳಿಂದ ಹೊಡೆದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಆರ್ ಪಿ ಮತ್ತು ಪಿ ಆರ್ ಬಿ ವಕೀಲರಿಂದಃ**

4. ನಾನು ಡಿಪ್ಲೊಮಾ ಮೆಕ್ಯಾನಿಕಲ್ ಓದಿರುತ್ತೇನೆ. 2021 ರಲ್ಲಿ ಡಿಸಿ ಕಚೇರಿಯ ಎದುರುಗಡೆ ಇರುವ ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆನು. ಆಗ ನಾನು 2 ವಿಷಯಗಳಲ್ಲಿ ತೇರ್ಗಡೆ ಹೊಂದಿರಲಿಲ್ಲ ಆ ಕಾರಣ ಜೆರಾಕ್ಸ್ ಉದ್ಯೋಗ ಮಾಡುತ್ತಿದ್ದೆನು. ಚಾಸಾ 1, 8, 10 ರಿಂದ 12 ರವರು ನನ್ನ ಆತ್ಮೀಯ ಸ್ನೇಹಿತರು ಎಂದರೆ ಸರಿ. ಕೆ ಹೆಚ್ ಬಿ ಕಾಲೋನಿಯ ಬನ್ನಿಕಟ್ಟೆ ಪಾರ್ಕ್ ಸುತ್ತ ಮುತ್ತ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ರಾತ್ರಿ 10-00 ಗಂಟೆ ಸುಮಾರಿಗೆ ಅನ್ನದಾನ ಕಾರ್ಯಕ್ರಮಕ್ಕೆ ಬಹಳ ಜನ ಇದ್ದರು ಎಂದರೆ ಜನ ಬಂದು ಹೋಗು

ಮಾಡುತ್ತಿದ್ದರು. ಸ್ವಲ್ಪ ಜನ ಇದ್ದರು. ನಾನು ಘಟನೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಎಲ್ಲರೂ ಕೆ ಇ ಬಿ ಸರ್ಕಲ್ ಹತ್ತಿರ ಇರುವ ನಿವಾಸಿಗಳು ಎಂದರೆ ನನಗೆ ಗೊತ್ತಿಲ್ಲ.

5. ಪ್ರತಿ ವರ್ಷ ನಾವು ಬನ್ನಿಕಟ್ಟೆ ಪಾರ್ಕ್ ಬಳಿ ನಮ್ಮ ಸ್ನೇಹಿತರೆಲ್ಲ ಕೂಡಿ ಗಣೇಶ ಪ್ರತಿಷ್ಠಾಪನೆ ಮಾಡುತ್ತೇವೆ. ಗಣಪತಿಯನ್ನು ಸಾಮಾನ್ಯವಾಗಿ ತಾಳೂರು ರಸ್ತೆಯಲ್ಲಿ ಇರುವ ಕಾಲುವೆಯಲ್ಲಿ ವಿಸರ್ಜನೆ ಮಾಡುತ್ತಾರೆ ಎಂದರೆ ಸರಿ. ಬನ್ನಿಕಟ್ಟೆ ಪಾರ್ಕ್ ಗೆ ತಾಳೂರು ರಸ್ತೆಯ ಕಾಲುವೆಯು ಬಹಳ ಹತ್ತಿರ ಎಂದರೆ ಸರಿ. ಕೆ ಇ ಬಿ ಸರ್ಕಲ್ ಮತ್ತು ಬಸವೇಶ್ವರ ನಗರಕ್ಕೆ ಮೋಕಾ ರಸ್ತೆಯ ಕಾಲುವೆಯು ಬಹಳ ಹತ್ತಿರ ಇರುತ್ತದೆ ಎಂದರೆ ಸರಿಯಲ್ಲ. ಬಸವೇಶ್ವರ ನಗರ ಮತ್ತು ಕೆ ಇ ಬಿ ಸರ್ಕಲ್ ನ ಗಣಪತಿಗಳನ್ನು ಮೋಕಾ ರಸ್ತೆಯ ಕಾಲುವೆಗೆ ವಿಸರ್ಜನೆ ಮಾಡುತ್ತಾರೆ ಎಂದರೆ ಸರಿಯಲ್ಲ.

6. ಚಾಸಾ 7 ರವರು ಚಾಸಾ 1 ರವರಿಗೆ ಆತ್ಮೀಯ ಸ್ನೇಹಿತರು ಎಂದರೆ ಸರಿ. ಚಾಸಾ 7 ರವರು ಆರೋಪಿತರ ವಿರುದ್ದ ಜಗಳ ತೆಗೆದು ಗಲಾಟೆ ಮಾಡಿಕೊಂಡಿರುತ್ತಾನೆ ಎಂದರೆ ಸರಿ. ಆರೋಪಿತರು ಚಾಸಾ 7 ರವರ ಮೇಲೆ ಒಂದು ಪ್ರಕರಣ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಮತ್ತು ಚಾಸಾ 6 ರ ಮೇಲೆ ಚಾಸಾ 1 ರವರು ಈ ಪ್ರಕರಣದಲ್ಲಿ ದೂರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ 1 ರವರು ಆರೋಪಿತರಿಂದ ಯಾವುದೇ ಘಟನೆಯಾಗದಿದ್ದರೂ ಸಹ ನಾನು ಚಾಸಾ 1 ರವರಿಗೆ ಸಹಾಯ ಮಾಡಲು ಅವರ ಸುಳ್ಳು ದೂರಿಗೆ ಪೂರಕವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ಮತ್ತು 6 ರವರಿಗೆ ಜಾತಿ ಎತ್ತಿ ಬೈದಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ರಿಂದ 1 ಮತ್ತು 2 ನೇ ಆರೋಪಿತರು ಚಾಸಾ 1 ಮತ್ತು 6 ರವರಿಗೆ ಹೊಡೆದಿಲ್ಲ ಹಾಗೂ 3 ಮತ್ತು 4 ನೇ ಆರೋಪಿತರು ಚಾಸಾ 6 ರವರಿಗೆ ಕೈಗಳಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಈ ದಿನ ನ್ಯಾಯಾಲಯಕ್ಕೆ ನನ್ನ ಜೊತೆ ಬಂದಿರುತ್ತಾರೆ ಎಂದರೆ ಸರಿ. ನನ್ನನ್ನು ಈ ದಿನ ಚಾಸಾ 1 ರವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ, ನನ್ನ ಬಳಿ ಗಾಡಿ ಇಲ್ಲದ ಕಾರಣ ಅವರು ಬಂದಿರುತ್ತಾರೆ.

ಚಾಸಾ 10, 11 ರವರಿಗೆ ಗಾಡಿಗಳು ಇವೆ ಎಂದರೆ ಸರಿ. ಅವರೂ ಸಹ ತಮ್ಮ ಗಾಡಿಗಳಲ್ಲಿ ಬಂದಿರುತ್ತಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೆ. ಸರಿ ಇದೆ.**

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

**ವಿಶೇಷ ಮೊಕದ್ದಮೆ ಸಂಖ್ಯೆ- 1394/2021**

**ಪ್ರಾಸಾಃ- 8 ಚಾಸಾಃ- 11**

ಸಾಕ್ಷಿಯ ಹೆಸರು : ಸಂತೋಷ್

ತಂದೆಯ ಹೆಸರು : ಸತ್ಯನಾರಾಯಣ

ವಯಸ್ಸು : 30 ವರ್ಷ

ವೃತ್ತಿ : ಆಟೋ ಚಾಲಕ

ವಾಸಸ್ಥಳ : ಬಳ್ಳಾರಿ

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 10.2.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ನನಗೆ ಚಾಸಾ 1, 6 ರಿಂದ 10 ರವರು ಮತ್ತು 12 ರವರು ಪರಿಚಯ. ಚಾಸಾ 1, 6, 8 ರವರು ವಾಲ್ಮೀಕಿ ಜನಾಂಗದವರು. ನಾನು ಆರ್ಯವೈಶ್ಯ ಶೆಟ್ಟಿ ಜನಾಂಗದವನು. ಆರೋಪಿತರು ನನಗೆ ಗೊತ್ತು. ಆರೋಪಿ 1 ಮತ್ತು 2 ರವರು ಮುಸ್ಲೀಂ ಜನಾಂಗದವರು ಉಳಿದ ಆರೋಪಿತರು ಯಾವ ಜಾತಿಯವರು ಎಂದು ನನಗೆ ಗೊತ್ತಿಲ್ಲ. 2021 ರ ಗಣೇಶ ಹಬ್ಬದ ಮೂರನೇ ದಿನದಂದು ನಾವು ಹೌಸಿಂಗ್ ಬೋರ್ಡ್ ಬನ್ನಿಕಟ್ಟೆ ಪಾರ್ಕ್ ಬಳಿ ಗಣಪತಿ ಪ್ರತಿಷ್ಠಾಪನೆ ಮಾಡಿದ್ದು ಅಲ್ಲಿ ಇದ್ದೆವು. ನಾನು, ಚಾಸಾ 1, 6 ರಿಂದ 10 ಮತ್ತು ಸ್ನೇಹಿತರು ಇದ್ದೆವು. ಚಾಸಾ 7 ರವರು ಟ್ಯಾಂಕ್ ಬಳಿ ಗಣಪತಿ ಕೂಡಿಸಿದ್ದರು. 1 ನೇ ಆರೋಪಿಯು ಚಾಸಾ 7 ರವರ ಗಣಪತಿಯು ನಮ್ಮ ಗಣಪತಿಯ ಮುಂದಿನಿಂದ ಹೋಗಬೇಕು ಎಂದು ಹೇಳಿದನು. ಚಾಸಾ 7 ರವರು ತಮ್ಮ ಗಣಪತಿಯನ್ನು ಸಿದ್ದಾರ್ಥ ಕಾಲೋನಿ ಕಡೆ ತೆಗೆದುಕೊಂಡು ಹೋಗಿದ್ದರು. ಆಗ 1 ನೇ ಆರೋಪಿಯ ಚಾಸಾ 7 ರವರಿಗೆ ಹೊಡೆಯುತ್ತಿದ್ದು ಚಾಸಾ 8 ರವರು ಅದನ್ನು ಕೇಳಲು ಹೋಗಿರುತ್ತಾರೆ. ಆಗ ನೀನ್ಯಾರು ಕೇಳಲು ಎಂದು 1 ನೇ ಆರೋಪಿಯು ಚಾಸಾ 8 ರವರನ್ನು ಹೊಡೆದಿರುತ್ತಾರೆ. ಅಲ್ಲಿಂದ ಆರೋಪಿಯು ಹೋಗಿದ್ದು ನಂತರ ಸ್ವಲ್ಪ ಸಮಯದಲ್ಲಿ ಬಹಳ ಜನ ಟಾಟಾ ಎಸಿ ವಾಹನದಲ್ಲಿ ಬಂದರು. ಆಗ 1 ನೇ ಆರೋಪಿಯು ಚಾಸಾ 1 ರವರಿಗೆ ಕಟ್ಟಿಗೆ ತೆಗೆದುಕೊಂಡು ಬಲಕಣ್ಣಿನ ಹುಬ್ಬಿಗೆ

ಹೊಡೆದನು. 2 ನೇ ಆರೋಪಿಯು ಜಗಳ ಬಿಡಿಸಲು ಬಂದ ಚಾಸಾ 6 ರವರ ಎಡಕಣ್ಣಿನ ಹುಬ್ಬಿಗೆ ಹೊಡೆದರು. ನಂತರ ಗಲಾಟೆಯನ್ನು ನಾವು ಬಿಡಿಸಿರುತ್ತೇವೆ ಪೋಲೀಸರು ಬಂದರು. ಸಾಕ್ಷಿಯು ಮು ಮಾ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರು ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2 ರಿಂದ 4 ನೇ ಆರೊಪಿತರು ಗೈರು ಹಾಜರು ಇದ್ದು ಅವರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಆರೋಪಿತರನ್ನು ಗುರುತಿಸುವಿಕೆಯಲ್ಲಿ ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ಹೇಳಿರುತ್ತಾರೆ. ಟಾಟಾ ಎಸಿ ನಂಬರ್ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ).**

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

2. 1 ಮತ್ತು 2 ನೇ ಆರೋಪಿಯು ಚಾಸಾ 1 ಮತ್ತು 8 ರವರಿಗೆ ವಾಲ್ಮೀಕಿ ಸೂಳೆ ಮಕ್ಕಳೇ ನಿಮ್ಮದು ಜಾಸ್ತಿಯಾಗಿದೆ ಎಂದು ಬೈದರು ಎಂದರೆ ಸರಿ. 3 ಮತ್ತು 4 ನೇ ಆರೋಪಿತರು ಚಾಸಾ 6 ರವರಿಗೆ ಕೈ ಕಾಲುಗಳಿಂದ ಹೊಡೆದಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಆರ್ ಪಿ ಮತ್ತು ಪಿ ಆರ್ ಬಿ ವಕೀಲರಿಂದಃ</u>**

3. ನಾನು 6 ನೇ ತರಗತಿವರೆಗೆ ಓದಿರುತ್ತೇನೆ. ನನ್ನದು ಸ್ವಂತ ಆಟೋ ಇರುತ್ತದೆ. ನಾನು 2021 ರಲ್ಲಿ ಆಟೋ ಓಡಿಸುತ್ತಿದ್ದೆನು. ಚಾಸಾ 1, 7 ರಿಂದ 10 ಮತ್ತು 12 ರವರು ನನ್ನ ಸ್ನೇಹಿತರು ಎಂದರೆ ಸರಿ. ನಾವೆಲ್ಲಾ ಒಂದೇ ಓಣಿಯಲ್ಲಿ ವಾಸ ಇರುತ್ತೇವೆ. ಕೆ ಇ ಬಿ ಸರ್ಕಲ್, ಸಿದ್ದಾರ್ಥ ಕಾಲೋನಿ, ಕೆ ಹೆಚ್ ಬಿ ಕಾಲೋನಿ ಬೇರೆ ಬೇರೆ ಪ್ರದೇಶಗಳು ಎಂದರೆ ಸರಿ. ಕೆ ಇ ಬಿ ಸರ್ಕಲ್ ಎನ್ನುವ ಪ್ರದೇಶವು ಮೋಕಾ ಮುಖ್ಯ ರಸ್ತೆ ಇರುತ್ತದೆ ಎಂದರೆ ಸರಿ. ಸಿದ್ದಾರ್ಥ ಕಾಲೋನಿಯು ವಾಟರ್ ಬೂಸ್ಟರ್ ನಿಂದ ಒಳಗಡೆ ಹೋಗಬೇಕಾಗುತ್ತದೆ ಎಂದರೆ ಸರಿ. ಕೆ ಹೆಚ್ ಬಿ ಕಾಲೋನಿಗೆ ಬ್ರಹ್ಮಯ್ಯ ಗುಡಿ ಹತ್ತಿರ ಕಪ್ಪಗಲ್ ರಸ್ತೆಯ ಕಾಲುವೆಯು ಹತ್ತಿರವಾಗುತ್ತದೆ ಎಂದರೆ ಸರಿ. ಕೆ ಹೆಚ್ ಬಿ ಕಾಲೋನಿಯಲ್ಲಿ ಕೂಡಿಸಿದ ಗಣೇಶ ಮೂರ್ತಿಯು ಕಪ್ಪಗಲ್ ರಸ್ತೆಯಲ್ಲಿ ವಿಸರ್ಜನೆ ಮಾಡುತ್ತಾರೆ ಎಂದರೆ ಸರಿ. ಕೆ ಇ ಬಿ ಸರ್ಕಲ್ ಹಾಗೂ ಬಸವೇಶ್ವರ ನಗರದ ಗಣೇಶ ಮೂರ್ತಿಗಳನ್ನು ಮೋಕಾ

ರಸ್ತೆಯಲ್ಲಿ ಬರುವ ಕಾಲುವೆಯಲ್ಲಿ ವಿಸರ್ಜನೆ ಮಾಡುತ್ತಾರೆ ಎಂದರೆ ಸರಿ. ಬನ್ನಿಕಟ್ಟೆಯ ಪಾರ್ಕ್ ಮತ್ತು ಟ್ಯಾಂಕ್ ಎನ್ನುವ ಪ್ರದೇಶಗಳು ಬೇರೆ ಬೇರೆಯಾಗಿರುತ್ತವೆ. ಸದರಿ ಎರಡು ಜಾಗಕ್ಕೆ 600 ಮೀ. ದೂರ ಇರುತ್ತದೆ.

4. ಕೆ ಹೆಚ್ ಬಿ ಕಾಲೋನಿಯಲ್ಲಿರುವ ನನ್ನ ವಾಸದ ಮನೆಯನ್ನು ಬಾಡಿಗೆಗೆ ಪಡೆದಿರುತ್ತೇನೆ. 2021 ರಲ್ಲಿ ನಾನು ಹೌಸಿಂಗ್ ಬೋರ್ಡ್ ಪಾರ್ಕ್ ಬಳಿ ವಾಸವಾಗಿದ್ದೆನು. ನಮ್ಮ ಮನೆಯ ಸುತ್ತಮುತ್ತ ಬಹಳಷ್ಟು ಮನೆಗಳು ಇವೆ ಎಂದರೆ ಸರಿ. ಸದರಿ ಟ್ಯಾಂಕ್ ಬಳಿ ಸಹ ಬಹಳಷ್ಟು ಮನೆಗಳು ಇವೆ ಎಂದರೆ ಸರಿ. ಗಣೇಶ ಮೂರ್ತಿಗಳನ್ನು ಕೆಲವರು 3 ದಿನ ಮತ್ತು ಕೆಲವರು 6 ಕ್ಕೆ ವಿಸರ್ಜನೆ ಮಾಡುತ್ತಾರೆ ಎಂದರೆ ಸರಿ. ದಿ: 12-9-2021 ರಂದು ರಾತ್ರಿ 10-00 ಗಂಟೆ ಸುಮಾರರಿಗೆ ಗಣೇಶ ಬಳಿ ಬಹಳಷ್ಟು ಜನ ಸೇರಿದ್ದರು ಎಂದರೆ ಸರಿ.

5. 1 ನೇ ಆರೋಪಿಯು ಚಾಸಾ 7 ರವರಿಗೆ ಬೈದಿಲ್ಲ, ಮತ್ತು 1 ನೇ ಆರೋಪಿಯು ಹೋಗಿ ಬಹಳಷ್ಟು ಜನರನ್ನು ಟಾಟಾ ಎಸಿಯಲ್ಲಿ ಕರೆದುಕೊಂಡು ಬಂದಿಲ್ಲ, 1 ಮತ್ತು 2 ನೇ ಆರೊಪಿತರು ಮು ಮಾ 1 ಮತ್ತು 2 ರಿಂದ ಚಾಸಾ 1 ಮತ್ತು 6 ರವರಿಗೆ ಹೊಡೆದಿಲ್ಲ, ಜಾತಿ ಎತ್ತಿ ಬೈದಿಲ್ಲ, ಆರೋಪಿ 3 ಮತ್ತು 4 ರವರು ಚಾಸಾ 6 ರವರನ್ನು ಕೈ ಕಾಲುಗಳಿಂದ ಹೊಡೆ ಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ರಂತಹ ವಸ್ತುಗಳು ಸಾಕಷ್ಟು ಸಿಗುತ್ತವೆ ಎಂದರೆ ಸರಿ. ಚಾಸಾ 1 ರವರು ನನ್ನ ಸ್ನೇಹಿತರಾಗಿದ್ದರಿಂದ ಅವರ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ. ಸರಿ ಇದೆ.**

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ವಿಶೇಷ ನ್ಯಾಯಾಲಯ, ಬಳ್ಳಾರಿ.**